Reg.No. M. 1560.
KODAGU MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಪಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೪ | ತಾರೀಕು ೨೫—೮—೧೯೪೪ನೇ ಶುಕ್ರವಾರ. | ಸಂಚಿಕೆ ೧೨

ಪಾಕಿಸ್ಥಾನ ಸಾಧ್ಯವೇ?

ಹಿಂದುಸ್ಥಾನವನ್ನು ವಿಂಗಡಿಸಿ ಪಾಕಿಸ್ಥಾನವನ್ನು ಕಟ್ಟಲು ಬ್ಯಾ. ಜಿನ್ನಾ ಅವರು ಹೊರಟಿರುವರು. ಮಹಾತ್ಮರು ರಾಜಾಜಿಯವರ ಸೂತ್ರವನ್ನು ಒಪ್ಪಿ ಬ್ಯಾ. ಜಿನ್ನಾರವರೊಂದಿಗೆ ಮಾತುಕತೆ ನಡೆಸಲು ಒಪ್ಪಿರುವುದರಿಂದ ಹಿಂದುಸ್ಥಾನದಲ್ಲಿ ಹೊಸ ವಾತಾವರಣವು ಉಂಟಾಗಿರುವುದು.

ರಾಜಕೀಯ ಮತ್ತು ವ್ಯವಹಾರಿಕ ದೃಷ್ಟಿಯಿಂದ ಹಿಂದುಸ್ಥಾನವನ್ನು ವಿಂಗಡಿಸುವುದು ಯೋಗ್ಯವಲ್ಲವೆಂದು ಈ ಕೆಳಗೆ ಕೊಟ್ಟ ಅಂಕೆಸಂಖೆಗಳಿಂದ ತೋಳೆದುವುದು. ಮುಸ್ಲಿಮರ ಪಾಕಿಸ್ಥಾನ ಮತ್ತು ಹಿಂದುಗಳ ಹಿಂದುಸ್ಥಾನ ಇವು ಒಂದನ್ನು ಬಿಟ್ಟು ಇನ್ನೊಂದು ಇರಲು ಶಕ್ಯವಿಲ್ಲ. ಪಾಕಿಸ್ಥಾನದಲ್ಲಿ ಸಿಗುವ ಕೆಲವು ಸಾಮಗ್ರಿಗಳ ಕೊರತೆಯು ಹಿಂದೂಸ್ಥಾನದಲ್ಲಿದೆ; ಹಿಂದುಸ್ಥಾನದಲ್ಲಿ ದೊರೆಯುವ ಕೆಲವು ಧಾತುಗಳ ಕೊರತೆಯು ಪಾಕಿಸ್ಥಾನದಲ್ಲಿದೆ. ಹಿಂದುಸ್ಥಾನದಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣವು ಹೇರಳವಾಗಿದ್ದರೆ ಪಾಕಿಸ್ಥಾನದಲ್ಲಿ ಪೆಟ್ರೋಲಿಣ್ಣೆಯು ಬೇಕಾದಷ್ಟಿದೆ. ಆದರೆ ಒಂದಿಲ್ಲದಿದ್ದರೆ ಇನ್ನೊಂದು ನಿಷ್ಪ್ರಯೋಜಕವಾಗುವುದು. ಎಲ್ಲ ಭಾಗಗಳೂ ಸರಿಯಾಗಿವ್ದು ಒಂದೇ ರೀತಿಯಿಂದ ಕ್ರಿಯೆಯಾಗುವಂತೆ ಮಾಡಿದರೆ ಮಾತ್ರ ಯಂತ್ರಗಳು ಚಲಿಸುವಂತೆ ಎಲ್ಲ ಭಾಗಗಳೂ ಒಂದುಕ್ಕೊಂದು ಹೊಂದಿಕೊಂಡು ಕೂಡಿ ನಡೆದರೆ ಮಾತ್ರ ಹಿಂದುಸ್ಥಾನದ ರಾಜಕಾರಣವು ಸುಸೂತ್ರವಾಗಿ ಸಾಗಬಲ್ಲುದು. ಜಾತೀಯ ಆಧಾರದ ಮೇಲೆ ಹಿಂದುಸ್ಥಾನವನ್ನು ವಿಂಗಡಿಸಿ ಪಾಕಿಸ್ಥಾನಕ್ಕೆ ಜನ್ಮ ಕೊಟ್ಟರೆ ಇದರಿಂದ ಮುಸ್ಲಿಮರೇ ನಷ್ಟಕ್ಕೆ ಗುರಿಯಾಗುವರು. ಹಿಂದುಸ್ಥಾನವು ತನ್ನ ಪ್ರಾಬಲ್ಯವನ್ನು ಚೀನದೊಂದಿಗಿಟ್ಟುಕೊಂಡು ಅಸ್ಥಿರವಿರುವ ಹೆಜ್ಜೆನ ಕಬ್ಬಿಣ, ಕಲ್ಲಿದ್ದಲು ಮತ್ತು ಪ್ರಜೆಗಳ ಸಹಾಯದಿಂದ ಪೂರ್ವ ನಿಶಿಯಾದ ಮುಖಂಡತ್ವದಲ್ಲಿ ಭಾಗವಹಿಸಬಲ್ಲುದು. ಪಾಕಿಸ್ಥಾನವು ವಿಂಗಡಿಸಲ್ಪಟ್ಟರೆ ಬಾಯಿಬಿಡಬೇಕಾಗುವುದು. ಹಿಂದುಸ್ಥಾನವನ್ನು ವಿಭಜಿಸುವ ಲೀಗದ ಧೋರಣೆಯು ಯಶಸ್ವಿಯಾದರೂ ಅದರಿಂದ ಯಾವ ಪ್ರಯೋಜನವೂ ಮುಸ್ಲಿಮರಿಗೆ ಆಗಲಾರದು. ಅದು ದಕ್ಕಿಂದ ಹಿಂದುಸ್ಥಾನದ ಅಖಂಡತ್ವವನ್ನು ಕಾಯ್ದುಕೊಳ್ಳುವುದು ಇಬ್ಬರಿಗೂ ಉಪಯುಕ್ತವಾದುದು; ಶ್ರೇಯಸ್ಕರವಿದೆ.

ಪ್ರಜಾ ಸಂಖ್ಯೆ.

ಹಿಂದುಸ್ಥಾನದಲ್ಲಿರುವ ಅನೇಕಾನೇಕ ಜಾತಿ, ಮತ ಪಂಥಾನುಯಾಯಿಗಳ ಪ್ರಜಾ ಸಂಖ್ಯೆಯು ಅಧಿಕಾರಯುಕ್ತವಾಗಿ ದೊರೆಯುವಂತಾಗಿದೆ. ಮುಸ್ಲಿಮರು ಬಹುಸಂಖ್ಯೆಯಿಂದಿರುವ, ಅರ್ಥಾತ್ ಪಾಕಿಸ್ಥಾನದೊಳಗೆ ಸೂಡುವ ಬ್ರಿಟಿಷ್ ಪ್ರಾಂತಗಳ ಪ್ರಜಾಸಂಖೆಯ ಅಂದಾಜನ್ನು 'ಸ್ಟೇಟ್ಸಮನ್ಸ್ ಈಯರ್ ಬುಕ್', ಕೊಟ್ಟಿರುವುದು. ಆ ಅಂದಾಜುಗಳು ಈ ಕೆಳಗಿನಂತಿವೆ:-

ಬಲೂಚಿಸ್ಥಾನ: 4,64,000 ಪ್ರಜೆಗಳಲ್ಲಿ 4,05,000 ಜನರು ಮುಸ್ಲಿಮರು—ನೂರಕ್ಕೆ 87 ರಷ್ಟು (1931);

ಬಂಗಾಲ: 6,03,00,000 ಪ್ರಜೆಗಳಲ್ಲಿ 3,25,60,000 ಜನರು ಮುಸ್ಲಿಮರು—ನೂರಕ್ಕೆ 54 ರಷ್ಟು (1941);

ವಾಯವ್ಯ ಗಡಿನಾಡು: 30,38,000 ಪ್ರಜೆಗಳಲ್ಲಿ 27,64,000 ಜನರು ಮುಸ್ಲಿಮರು—ನೂರಕ್ಕೆ 73 ರಷ್ಟು (1941); ಪಂಜಾಬ: 2,35,80,000 ಪ್ರಜೆಗಳಲ್ಲಿ 1,33,22,000 ಜನರು ಮುಸ್ಲಿಮರು—ನೂರಕ್ಕೆ 57 ರಷ್ಟು (1931);

ಸಿಂಧ್: 45,35,000 ಪ್ರಜೆಗಳಲ್ಲಿ 32,08,300 ಜನರು ಮುಸ್ಲಿಮರು—ನೂರಕ್ಕೆ 71 ರಷ್ಟು (1931) ಬ್ರಿಟಿಷ್ ಪ್ರಾಂತಗಳಾದ ಅಸಾಮ ಮತ್ತು ಕಾಶ್ಮೀರಗಳು ಇದರಲ್ಲಿ ಸಮಾವೇಶ ಹೊಂದುವುವು. 1931ರ ಜನಗಣನೆಯಂತೆ ಅಸಾಮದಲ್ಲಿ 27,55,914 ಜನ ಮುಸ್ಲಿಮರೂ 49,31,760 ಜನ ಹಿಂದೀಯರೂ ಇದ್ದರೆಂದು ಲೆಕ್ಕ ಹಾಕಿರುವರು. ಈ ಸಂಖ್ಯೆಗಳ ಆಧಾರದ ಮೇಲೆ ಅಸಾಮದಲ್ಲಿ ಮುಸ್ಲಿಮರು ಬಹು ಸಂಖ್ಯಾಕರೆಂದು ಹೇಳಬರುವಂತಿಲ್ಲ. ಹೀಗಿದ್ದಾಗ್ಯೂ ಈ ಪ್ರಾಂತವು ಪಾಕಿಸ್ಥಾನದಲ್ಲಿ ಕೆಳಗಿನ ಕಾರಣಕ್ಕಾಗಿ ಸೇರ್ಪಡೆಹೊಂದುವುದು:-

(1) ಮುಸ್ಲಿಮ ಬಹು ಸಂಖ್ಯಾಕ ಪ್ರಾಂತವೆಂದು ಎಣಿಸಲ್ಪಟ್ಟಿದೆ ಮತ್ತು (2) ಬ್ರಿಟಿಷರ ಅಧೀನಕ್ಕೊಳಪಡದ ನಿಭಾಗದ ಪ್ರಜಾಸಂಖೆಯ ಗಣನೆಯು ಸರಿಯಾಗಿ ಮಾಡದಿರುವುದರಿಂದ ಮುಸ್ಲಿಮರೇ ಬಹು ಸಂಖ್ಯಾಕರೆಂದೂ ಊಹಿಸಲಾಗುತ್ತಿದ್ದೆ. ಆದುದರಿಂದ ಈ ಭಾಗವು ಮುಸ್ಲಿಮರಿಗೆ ಸೇರತಕ್ಕದ್ದು. ಕಾಶ್ಮೀರದ ಮಟ್ಟಿಗೆ ಈ ಸಂಖೆಗಳಲ್ಲಿ ವ್ಯತ್ಯಾಸವು ಇರುವುದು. ಮುಸ್ಲಿಮರು ಕಾಶ್ಮೀರದ ಪ್ರಜಾಸಂಖ್ಯೆಯ ಬಹ್ವಂಶವೆಂದು ಹೇಳಲಾಗುತ್ತಿದೆ.

ಮುಸ್ಲಿಮ ಲೀಗದ ಪ್ರಧ್ಯಕ್ಷರಾದ ಶ್ರೀ ಮಹಮ್ಮದಾಲಿ ಜಿನ್ನಾರ ಪಾಕಿಸ್ಥಾನ ಯೋಜನೆಯಲ್ಲಿ ಈ ಕೆಳಗಿನ 7 ಸಂಸ್ಥಾನಗಳು ಸಮಾವೇಶ ಹೊಂದುವವು:-ಬಲೂಚಿಸ್ಥಾನ, ವಾಯವ್ಯ ಗಡಿನಾಡು, ಕಾಶ್ಮೀರ, ಸಿಂಧ್, ಪಂಜಾಬ, ಬಂಗಾಲ ಮತ್ತು ಅಸಾಮ. ಪ್ರಸ್ತುತ ಈ ಪ್ರಾಂತಗಳಿಗಡಿಗಳೇ ಪಾಕಿಸ್ಥಾನದ ಗಡಿಗಳಿರತಕ್ಕದ್ದೆಂದು ಅವರ ಮತವಿದ್ದಂತಿದೆ. ಈ ಪಾಕಿಸ್ಥಾನದ ಪೂರ್ವ ಮತ್ತು ಪಶ್ಚಿಮ ಭಾಗಗಳು-700 ಮೈಲುಗಳಷ್ಟು ಅಗಲ-ಹಿಂದುಸ್ಥಾನದಿಂದ ವಿಂಗಡಿಸಲ್ಪಡುವವು.

ಹಿಂದುಸ್ಥಾನವು ಬ್ರಹ್ಮದೇಶವನ್ನು ಬಿಟ್ಟು-ಕಲ್ಲಿದ್ದಲು, ಪೆಟ್ರೋಲಿಣ್ಣೆ, ಕಬ್ಬಿಣ, ಮ್ಯಾಂಗನೀಸ, ಕ್ರೋಮ್, ಟಿನ್ನು ಮೊದಲಾದ ಧಾತುಗಳನ್ನು ಹೆಜ್ಜೆಚ್ಚು ಪ್ರಮಾಣದಲ್ಲಿ ಈಗ ಪೂರೈಸುತ್ತಿದೆ. ಜಾಗ್ರಫಿಕ ವ್ಯವಹಾರದಲ್ಲಿ ಹಿಂದುಸ್ಥಾನವು ಹಿಂದು ಪ್ರಮುಖ್ಯ ಸ್ಥಾನವನ್ನು ಕಳೆಯುಕೊಳ್ಳದಿರದು. ಕಬ್ಬಿಣ, ಕಲ್ಲಿದ್ದಲು ಮತ್ತು ಎಣ್ಣೆ ಈ ಮೂರು ವಸ್ತುಗಳ ಮೇಲೆ ಕೈಗಾರಿಕೆಯ ಅಭಿವೃದ್ಧಿಯು ಅವಲಂಬಿಸಿರುವುದು. ಅವು ಹಿಂದುಸ್ಥಾನದಲ್ಲಿ ಸಾಕಷ್ಟಿವೆ.

ಕಲ್ಲಿದ್ದಲು.

ಹಿಂದುಸ್ಥಾನದ ಖನಿಜ ಉತ್ಪತ್ತಿಯ ಮತ್ತು ಪ್ರಸರಣದ ದೃಷ್ಟಿಯಿಂದ ಕಲ್ಲಿದ್ದಲಿಯ ಉತ್ಪಾದನೆಯು ಅತಿ ದೊಡ್ಡದೆಂದು ಹೇಳಬಹುದು. ಎಲ್ಲ ತರಗತಿಯ ಕಲ್ಲಿದ್ದಲಿಯೂ ಹಿಂದುಸ್ಥಾನದಲ್ಲಿ ದೊರೆಯುವುದು. ಪ್ರತಿಯೊಂದು ಸಂಸ್ಥಾನದಲ್ಲೆಂಬಂತೆ ಹಿಂದುಸ್ಥಾನದಲ್ಲಿ ಕಲ್ಲಿದ್ದಲಿಯು ಇವೆ. ಆದರೆ ಉತ್ತಮವಾದ ಕಲ್ಲಿದ್ದಲು ಹೆಚ್ಚು ಪ್ರಮಾಣದಲ್ಲಿ-100ಕ್ಕೆ 98ರ ಸಾಗಗಳಷ್ಟಿರುವ ಪುರಾತನ ಗುಡ್ಡ (ಪೆರ್ಮಿಯನ್)ಗಳಲ್ಲಿ ಸಿಗುವುದು.

ಮಧ್ಯ ಹಿಂದುಸ್ಥಾನದೆಲ್ಲೆಯೂ ಕಲ್ಲಿದ್ದಲಿಯ ಅನೇಕ ಕಾಣಿಗಳಿವೆ. ಇವುಗಳಲ್ಲಿ ಜೊಹಿಲ್ಲಾ ಖನಿಯು ಮುಖ್ಯವಾದುದು. ಈ ಕಣಿಯಲ್ಲಿ 3 ಕೋಟಿಯಿಂದ 10 ಕೋಟಿ ಟನ್ನಿನ ವರೆಗೆ ಕಲ್ಲಿದ್ದಲಿಯು ದೊರೆಯಬಹುದೆಂದು ಲೆಕ್ಕ ಹಾಕಿರುವರು. ಮಧ್ಯ ಪ್ರಾಂತದ ವರ್ಧಾ ಕಂದರದಲ್ಲಿ 40 ಕೋಟಿ ಟನ್ ಕಲ್ಲಿದ್ದಲಿ ಇದೆ. ಬಲು ಚಿನ್ನಾಗಿನದಲ್ಲಿ ಅಲ್ಲಿ ಇಲ್ಲಿ ಎಂಬಂತೆ ಕೆಲವೆಡೆ ಕಲ್ಲಿದ್ದಲಿಯ ಕಣಿಗಳಿವೆ.

ಬಿಹಾರ ಮತ್ತು ಒರಿಸಾಗಳಲ್ಲಿ ದೊರೆಯುವ ಕಲ್ಲಿದ್ದಲಿಯು ಎಲ್ಲ ಉಪಯೋಗಗಳಿಗೂ ಉತ್ತಮವಾಗಿವೆ. ಯಲ್ಲದೆ ರೈಲು ಬಂಡಿಯಿಂದ ಇಲ್ಲವೆ ಸ್ಟೀಮರುಗಳಿಂದ ಸಾಗಿಸಲೂ ಅನುಕೂಲವಾದಂತಿವೆ. 1915 ರಿಂದ 1935ರ ನಡುವೆ ಅಂದಾಜು ಹೂಡಲ್ಪಟ್ಟಂತೆ ಇಲ್ಲಿ 1,015 ಕೋಟಿ ಟನ್ ಕಲ್ಲಿದ್ದಲಿದೆ.

ಕಬ್ಬಿಣ.

ಬಿಹಾರ, ಒರಿಸಾ ಮತ್ತು ಬಂಗಾಲಗಳಲ್ಲಿ ಕಬ್ಬಿಣವು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದು. 1900 ರಿಂದ 1932ರ ವರೆಗೆ ಬಿಹಾರ ಮತ್ತು ಒರಿಸಾಗಳು 42,15,000 ಟನ್ನು ಬೆಲೆ ಬರುವ 2,20,000 ಟನ್ ಕಬ್ಬಿಣವನ್ನು ಭೂಮಿಯಿಂದ ತೆಗೆದವು. ಯುದ್ಧ ಪೂರ್ವದ ಅಂಕೆಸಂಖ್ಯೆಗಳ ಆಧಾರದ ಮೇಲೆ ಹೇಳುವುದಿದ್ದರೆ ಈಗ ಉತ್ಪಾದನೆಯು ಹೆಚ್ಚುತ್ತಿರಬಹುದಾಗಿದೆ.

ಪಾಕಿಸ್ಥಾನವು ವಿಂಗಡಿಸಲ್ಪಟ್ಟುದೇ ಆದರೆ ಸಮರ್ಪಕವಾದ ಕಬ್ಬಿಣದ ಕಣಿಗಳು ಜಿಲ್ಲೆಗಳೆಲ್ಲವೂ ಹಿಂದುಸ್ಥಾನದ ಉಳಿದ ಭಾಗದಲ್ಲಿಯೇ ಉಳಿಯಲಿವೆ. ಪಾಕಿಸ್ಥಾನದ ಪಶ್ಚಿಮ ಭಾಗದಲ್ಲಿ ಕಬ್ಬಿಣದ ಕಣಿಗಳೆಯೊದರೂ ಈ ಕಣಿಗಳ ಉತ್ಪಾದನೆಯಿಂದ ಮಹತ್ವದ ಕಾರಖಾನೆಗಳನ್ನು ಸ್ಥಾಪಿಸಲು ಶಕ್ಯವಿಲ್ಲ. ಬಂಗಾಲದಲ್ಲೇನೋ ಸ್ವಲ್ಪ ಮಟ್ಟಿಗೆ ಕಬ್ಬಿಣವಿದೆ. ಆದರೆ ಈ ಕಬ್ಬಿಣದ ಪ್ರಮಾಣವು ಒರಿಸಾದ ಕಬ್ಬಿಣದ ಪ್ರಮಾಣಕ್ಕಿಂತ ಕಡಿಮೆಯಿದೆ.

ಪೆಟ್ರೋಲಿಣ್ಣೆ.

ಈ ನಿಟ್ಟಿನಿಂದ ಕಾರ್ಯವು ಗಡುಸಾಗಿ ಸಾಗಿದೆ. ಕೆಲವು ವರ್ಷಗಳಿಂದ ಎಣ್ಣೆಯು ಹೆಜ್ಜೆಚ್ಚಾಗಿ ತೆಗೆಯಲ್ಪಡುತ್ತಿದೆ ಈಗ ದೊರೆತ ಅಂಕೆಸಂಖ್ಯೆಗಳಂತೆ ಹೋದ ವರ್ಷ 2750 ಲಕ್ಷ ಗ್ಯಾಲನ್ 'ಕ್ರೂಡ್' ಎಣ್ಣೆಯು ದೊರೆತಿದೆಯೆಂದೆ ತಿಳಿಯುತ್ತದೆ. ಅಸಾಮದಲ್ಲಿಯ ಎಣ್ಣೆಯ ಕಣಿಗಳು ಮಹತ್ವದ್ದಿವೆ. ಪಂಜಾಬದಲ್ಲಿ ಕೌರ, ಫುಲಿಯೂದ ಮತ್ತು ಥಾರಟುಗಳಲ್ಲಿಯೂ ಎಣ್ಣೆಯು ದೊರೆಯುವುದು; ಎಂದರೆ, ಎಲ್ಲ ಎಣ್ಣೆಯ ಗನಿಗಳೂ ಪಾಕಿಸ್ಥಾನದಲ್ಲಿ ಉಳಿಯುವವು.

ಕಬ್ಬಿಣ, ಕಲ್ಲಿದ್ದಲಿ ಮತ್ತು ಎಣ್ಣೆಗಳ ಕಣಿವೆಗಳು—ಪಾಕಿಸ್ಥಾನ; ಹಿಂದುಸ್ಥಾನವೆಂಬ ಭೇದವನ್ನು ನೋಡದೆ ಸೃಷ್ಟಿಸ್ಥಿತಿಯನ್ನನುಸರಿಸಿ ಅಲ್ಲಲ್ಲಿ ಇರುವಂತೆ ಇತರ ಲೋಹಗಳ ಕಣಿವೆಗಳಾದರೂ ಅಲ್ಲಲ್ಲಿ ಇವೆ. ಪಾಕಿಸ್ಥಾನವು ವಿಂಗಡಿಸಲ್ಪಟ್ಟುದೇ ಆದರೆ ಅದು ತನ್ನ ಬೇಡಿಕೆಯನ್ನು ತುಂಬಿಕೊಳ್ಳುವಲ್ಲಿ ಸ್ವಯಂಸಂಪೂರ್ಣವಾಗಲಾರದು.

'ಹು. ಗ್ಗ'

ಕೊ ಡ ಗು

ತಾ. ೨೫-೮-೧೯೪೪ಳಳವೇ ಶುಕ್ರವಾರ

ಬ ಡ ವ ನ ಬ ವ ಣೆ.

ಕೊಡಗಿನ ರೈತನ ತೊಂದರೆಯು ದಿನೇ ದಿನೇ ಜಾಸ್ತಿಯಾಗುತ್ತಾ ಬರುತ್ತಿದೆ. ಯುದ್ಧದ ಮೊಯಿಂದ ತನ್ನ ಜೀವನಕ್ಕೆ ಬೇಕಾದ ಅವಶ್ಯಕ ವಸ್ತುಗಳಿಗೆ ಬೆಲೆಯೇರಿದ್ದೊಂದು. ಅದರೊಂದಿಗೇ ತನ್ನ ಪರ್ಯಾಸ್ವವಾದ ಆಸ್ತಿಯ ಕೃಷಿಯಲ್ಲಿ ನಿಯಂತ್ರಣ ಬಂದು ಸಸ್ಯಕೊಳಗಾಡುವು ಮತ್ತೊಂದು, ಹೀಗೆ ಇವೆರಡು ಕಷ್ಟಗಳು ಯುದ್ಧ ಪ್ರಾರಂಭದಿಂದಲೇ ಅತನನ್ನು ಕಾಡುತ್ತಿದ್ದರೂ ಹೇಗೋ ಅತನು ಜೀವನ ಪಥದಲ್ಲಿ ಕುಂಟುತ್ತಾ ಪಡೆದನು. ಈಗ ಅತನ ನಿರಾಶಾಜನಕ ಜೀವನ ಮೂರ್ಗದಲ್ಲಿ ಮೇಲಿಂದ ಮೇಲೆ ಎಡರುಗಳು ಬೀಳತೊಡಗಿವೆ. ಬತ್ತದ ಬೆಲೆ ರೂ. 115 ಎಂದು ನಿಶ್ಚಯಿಸಲ್ಪಟ್ಟದ್ದರಿಂದ ಹೆಚ್ಚಿಗೆ ಬೆಳೆದು ಲಾಭ ಪಡೆಯಬೇಕೆಂಬ ರೈತನ ಆಶೆಗೆ ತಣ್ಣೀರೆರಚಿದಂತಾಯಿತು. ಆದರೆ ಭೂಪುತ್ರರಾದ ಅವರು ತನ್ನು ಜೀವನ ಖರ್ಚಿಗೆ ಮತ್ತು ಇತರ ಬೇಡಿಕೆಗಳಿಗೆ ಬೇಕಾಗುವಷ್ಟು ಹಣವಾದರೂ ಬೆಳೆಸಲೇ ಬೇಕು. ಈ ಪ್ರಯತ್ನದಲ್ಲೂ ಅತನಿಗೆ ಮುಂದೆ ಬಂದಿರುವ ಎಡರುಗಳು ಬಹು ದೊಡ್ಡವು. ಒಂದನೆಯದಾಗಿ ಎತ್ತುಗಳ ಬೆಲೆ. ಸಾಧಾರಣವಾಗಿ ಉರಂಭಕ್ಕೆ ಯೋಗ್ಯವಾದ ಒಂದು ಜೋಡಿ ಎತ್ತಿಗೆ ರೂ. 120ರಿಂದ 180 ಕೊಡಬೇಕು. ಅಂದರೆ ತನ್ನ 1 ಯೂ 1½ ಗಾಡಿ ಬತ್ತವನ್ನು ಖರಿ ಕೊಡಬೇಕು. ಯುದ್ಧಕ್ಕೆ ಮೊದಲು ಬತ್ತ ಗಾಡಿಗೆ ರೂ. 40 ರಿಂದ 60 ವರೆಗೆ ಇತ್ತೆಂಬುದು ಸತ್ಯ. ಆದರೆ ಈಗ ರೂ. 180 ಕೊಡುವ ಜೋಡಿಎಗ ರೂ. 40ಕ್ಕೆ ದೊರೆಯುತ್ತಿತ್ತು. ಮೇಲಾಗಿ ಈಗ ಎರಿಡ ಬೆರೆ ಕೊಡಲು ತಯಾರಿದ್ದರೂ ಎತ್ತುಗಳು ದೊರೆಯುವುದಿಲ್ಲ. ರೈತರ ದುರಾದೃಷ್ಟಕ್ಕೆ ಈ ವರ್ಷ ದನಗಳ ಖಾಯಿಲೆ ಎಲ್ಲಾ ಕಡೆ ವಿದ್ದು ವಿಪರೀತ ಹರಡುತ್ತಿದೆ. ಕೊಟ್ಟಿಗೆಯಲ್ಲಿ ಒಂದೇ ಒಂದು ಕರು ಸಹ ಇಲ್ಲದೆ ಸತ್ತುಹೋದ ಉದಾಹರಣೆಗಳು ಬಹಳ ಇವೆ. ಭೂಮಿಗೆ ಬೀಜ ಹಾಕಿ ಖಾಯಿಲೆಯಿಂದ ಜನಗಳೆಲ್ಲಾ ಸತ್ತ ಕಾರಣ ವ್ಯವಸಾಯ ಮಾಡಲಾರದೆ ಭೂಮಿ ಹಾಳು ಬಿದ್ದ ಉದಾಹರಣೆಗಳೂ ಹಲವಾರು ಇವೆ. ಈ ರೀತಿಯು ನಷ್ಟ ಕೇವಲ ಕೊಡಗಿನ ಕೆಲವೊಂದು ಭಾಗಗಳಲ್ಲಿ ಅಲ್ಲ. ಕೊಡಗಿನ ಉಷ್ಣ ಗಲಳ್ಳಾ ಅಲ್ಲಲ್ಲಿ ಖಾಯಿಲೆ ಇದ್ದು ಕೆ ನಷ್ಟ ಉಂಟಾಗಿದೆ. ವ್ಯವಸಾಯಕ್ಕೆ ಈ ರೀತಿ ದನಗಳ ಅಭಾವದಿಂದ ಪೆಟ್ಟು ಬಿದ್ದಿದ್ದರೆ, ಸರಿಯಾಗಿ ಉಳುಗಳು ದೊರೆಯದ ತೊಂದರೆ ಬೇರೆ ಇದೆ. ಉಳುಗಳು ದೊರೆಯದ ಕಾರಣ ಹೆಚ್ಚು ಭೂಮಿ ಇರುವವರು ವಾರಕ್ಕೆ ಕೊಡುವ ಪ್ರಯತ್ನ ಮಾಡಿದರು. ವಾರ ಹಿಡಿಯಲು ಜನವಿಲ್ಲದೆ ಭೂಮಿ ಹಾಳು ಬಿದ್ದ ನಿದರ್ಶನಗಳೂ ಇವೆ. ನುಳಿಗಾಲವು ಎಂದಿನಿಂತ ತಡವಾಗಿ ವ್ಯವಸಾಯವು ಬಹಳ ಹಿಂದೆ ಬಿದ್ದಿದೆ. ಹೀಗೆ ಒಂದಲ್ಲ; ಹಲವಾರು ಕಾರಣಗಳಿಂದ ಈ ವರ್ಷದ ವ್ಯವಸಾಯವು ಕೃಷಿಕರವಾಗಿ ಇಲ್ಲ.

ಈ ರೀತಿ ದಾರುಣವಾದ ಪರಿಸ್ಥಿತಿ ದೇಶದಲ್ಲೆಲ್ಲಾ ಉಪಸ್ಥಿತವಾಗಿರುವಾಗ ಸರಕಾರವು ಯಾವ ರೀತಿಯ ಸಹಾಯವನ್ನು ರೈತನಿಗೆ ಕೊಟ್ಟಿದೆ. ತಾವು ಹೇಳುತ್ತಿರುವ 'ಹೆಚ್ಚಿನ ಬೆಳೆಯಿರಿ' ಎಂಬ ಶುಷ್ಕ ವೇದಾಂತವನ್ನಲ್ಲದೆ ರೈತರಿಗೆ ಎತ್ತು ದನಗಳನ್ನು ಹೊರನಿನಿಂದ ತಂದಿ ಕೊಡಲಾಗಿದೆ; ದನಗಳು ಸತ್ತು ಮತ್ತು ಉಳುಗಳಿಲ್ಲದೆ ವ್ಯವಸಾಯ ಮಾಡಲಾರದೆ ಪಾಳುಬಿದ್ದ ಭೂಮಿಗಳ ಬಗ್ಗೆ ಸ್ವಲ್ಪ ಹಣ ಸಾಲ ಕೊಟ್ಟದ್ದಲ್ಲದೆ ಮತ್ತೆ ಏನು, ನೂಡಲಾಗಿದೆ ಮೊದಲಾದ ವಿವರಗಳನ್ನು ಸಾರ್ವಜನಿಕರ ಅವಗಾಹನೆಗೆ ಸರಕಾರವು ಪ್ರಕಟಿಸುವುದೊಳಿತು. ಹೇಗೂ ಈ ವರ್ಷದ ವ್ಯವಸಾಯ ಸಮಯ ಅಂತ್ಯವಾಗುತ್ತಾ ಬಂತು. ಸ್ಥೂಲವಾಗಿ ಹೇಳುವುದಾದರೆ ಈ ವರ್ಷದ ಕೊಡಗಿನ ಬೆಳೆ ಫಸಲು ಉತ್ಪತ್ತಿ ಶೇಕಡ 20ರಂತೆ ಕಡಿಮೆಯಾಗಬಹುದು. ಇದರಿಂದ ದೇಶಕ್ಕೆ ಎಷ್ಟು ದೊಡ್ಡ ನಷ್ಟ ಉಂಟಾದೀತೆಂಬದನ್ನು ಬೇರೆ ಹೇಳಬೇಕಿಲ್ಲ. ದನಕರುಗಳು ಸತ್ತು ವ್ಯವಸಾಯ ಮಾಡಲಾರದ, ಉಳುಗಳು ದೊರೆಯದೆ ಭೂಮಿ ಪಾಳು ಬಿದ್ದ ರೈತನ ಸ್ಥಿತಿಯನ್ನು ಪರಿಶೀಲಿಸಿ ಅವರಿಗೆ ಯೋಗ್ಯ ಸಹಾಯ ಕೊಡಬೇಕು; ಅಲ್ಲದೆ ಬರುವ ವರ್ಷ ಬತ್ತದ ಕ್ರಯವನ್ನು ರೂ. 150 ಆದರೂ ಏರಿಸಬೇಕಾಗಿದೆ.

ಒ ಳ ದೇ ಶ.

ಸೀಮೆಣ್ಣೆಯ ಅಭಾವದ ಬೆಸೆಯಿಂದ ಗಾಡಿಗಳು ರಾತ್ರಿ ವೇಳೆ ದೀಪವಿಲ್ಲದೆ ತಿರುಗಬಹುದೆಂದು ಜಿಲ್ಲಾ ಬೋರ್ಡು ಸಿಬ್ಬಂದಿಗಳಲ್ಲಿ ಪೊಲೀಸ್ ಸೂಪರಿಂಟೆಂಡೆಂಟರು ಹೇಳಿದರೆಂದು ತಿಳಿಯುತ್ತೇವೆ.

ಇಲ್ಲಿಯ ವೇದಾಂತ ಮಂದಿರದಲ್ಲಿ ನಾಳೆ ದಿನ ಸಾಯಂಕಾಲ ಆರು ಗಂಟೆಗೆ ಶ್ರೀ. ಕೆ. ಎಸ್. ಪದ್ಮನಾಭರವರು ವೇದಾಂತದ ವಿಚಾರ ಮಾತಾಡಲಿರುವರು.

ಮದ್ರಾಸು ಸರಕಾರದ ಅರಣ್ಯ ಖಾತೆಯಲ್ಲಿ ರೇಂಜ್ ಅಫೀಸರರಾಗಿರುವ ಶ್ರೀ. ಕೊಡಂದೆರ ಪೊನ್ನಪ್ಪನವರ ಪತ್ನಿಯವರು ಮೃತಪಟ್ಟರೆಂದು ತಿಳಿಯುತ್ತೇವೆ.

ಮಡಿಕೇರಿಯಲ್ಲಿ ಫ್ಲೇಗಿನಿಂದ ಒಬ್ಬನು ಮೃತನಾಗಿರುವನು. ಮತ್ತೊಬ್ಬನಿಗೆ ವಾಸಿಯಾಗಿದೆಯಂತೆ. ದಾಕುಹಾಳುವ ಕೆಲಸವು ಭರದಿಂದ ಪಡೆಯುತ್ತಿದೆ.

ಇಂಡಿಯಾ ಸರಕಾರದಿಂದ ನೇಮಿತವಾಗಿರುವ ಹಿಂದೂ ಲಾ ಕಮಿಟಿಯವರು ಜೀವಹಾಂಶ ಮದುವೆ, ವಿವಾಹ ವಿಚ್ಛೇದನ, ವೈಧವ್ಯ, ಗಾರ್ಡಿಯನ್‌ಶಿಪ್, ದತ್ತು ತೆಗೆಯುವುದು, ಮರಣಶಾಸನ ಬರೆಯದೆ ಸತ್ತುಹೋದ ವಿಷಯ ಮುಂತಾದವುಗಳ ಕುರಿತು ಒಂದು ಕರಡು ನಮೂದೆಯನ್ನು ತಯಾರಿಸಿರುವರು. ಸಾರ್ವಜನಿಕ ಅಭಿಪ್ರಾಯದ ಮೇಲೆ ಕಮಿಟಿಯವರು ಕರಡನ್ನು ತಿದ್ದುವುದರಿಂದ ಇಷ್ಟಪಡುವವರು ತಮ್ಮ ಅಭಿಪ್ರಾಯವನ್ನು ಜೇಪ್ ಕಮಿಷನರ ಮೂಲಕ ತಾ. 5-10-44ರ ಒಳಗೆ ಸದರಿ ಕಮಿಟಿಯ ಸೆಕ್ರೆಟರಿಯವರಿಗೆ ತಿಳಿಸಬಹುದೆಂದು ಪ್ರಕಟವಾಗಿದೆ.

ತಾ. 26-7-44 ರಲ್ಲಿ ಉಂಟಾದ ಸೋಮವಳೆಟ್ಟದ ಜನಾಹುತದಿಂದ ತಮ್ಮ ಪತ್ನಿ ಮತ್ತು ಮಾಲ್ವರು ಮಕ್ಕಳೊಡನೆ ನಿರಾಶ್ರಿತರಾದ ಶ್ರೀ ಪಡಿಜಾರ ರಮ್ಮನ ಐಯ್ಯಪಮ್ಮನವರಿಗೆ ಸಹಾಯಮೂಡಲಿಚ್ಛಿಸುವವರು ತಮ್ಮ ಸಹಾಯ ಧನವನ್ನು ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ಕಳುಹಿಸಬಹುದೆಂದೂ, ಅಲ್ಲಿ ಅದನ್ನು ಹೊಂದಿಕೊಂಡು ಅನಾಹುತದಿಂದ ಜಖಂಗೊಂಡು ಗುಣಹೊಂದುತ್ತಿರುವ ಐಯ್ಯಪಮ್ಮನವರಿಗೆ ತಲಪಿಸುವ ಏರ್ಪಾಡು ಮಾಡಲಾಗಿದೆಯೆಂದೂ ತಿಳಿಯಬರುತ್ತದೆ.

ಊಟ್ಕರ ಹಿಂದೂಸ್ಥಾನಕ್ಕೆ ಹೋಗಲಿರುವ ಇಂಪೀರಿಯಲ್ ಬ್ಯಾಂಕಿನ ಡಿಸ್ಟ್ರಿಕ್ಟ್ ಏಜಂಟರಾದ ಶ್ರೀ ಕೊಡಂದೆರ ನಂಜಪ್ಪನವರು ತಾ. 17-8-44 ರಲ್ಲಿ ನುಂಗಳೂರಿನಲ್ಲಿರುವ ಶ್ರೀ ಕೋಳೆರ ಪೊನ್ನಪ್ಪನವರ 'ಹೈ ವಿಲ್ಲಾ'ದಲ್ಲಿ ಮಂಗಳೂರಿನಲ್ಲಿ ಓದುತ್ತಿರುವ ಕೊಡಗಿನ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಒಂದು ಸಹಕ್ಕಾರ ಕೂಟವನ್ನೇರ್ಪಡಿಸಿದ್ದರೆಂದೂ, ಆ ಸಂದರ್ಭದಲ್ಲಿ ಸರ್ವರೂ ಶ್ರೀ ನಂಜಪ್ಪನವರ ಪುರೋಭಿವೃದ್ಧಿಯನ್ನು ಹಾರೈಸಿದರೆಂದೂ, ಮುಂಬರಲಿರುವ ಗಾಂಧಿ-ಜಿನ್ನಾ ಭೇಟಿಯು ಜಯಪ್ರದವಾಗಲೆಂದು ಪ್ರಾರ್ಥಿಸಲಾಯಿತೆಂದೂ ತಿಳಿದುಬರುತ್ತದೆ.

ಕಳೆದ ತಿಂಗಳಲ್ಲಿ ಸಾಂತ್ಕೇರಿ ಈರೇಗೌಡರು ತಮ್ಮ 108 ನೇ ವಯಸ್ಸಿನಲ್ಲೂ, ವೀರಾಜಪೇಟೆಯಲ್ಲಿರುವ ಚೀಂದಂಡ ತಿಮ್ಮಯ್ಯನವರ ತಾಯಿ ಇದೇ ತಾ 20ನೆಯ್ದು ತಮ್ಮ 92ನೇ ವಯಸಿನಲ್ಲೂ ಮೃತಿಯನ್ನೈದಿದರು.

ವಾರ್ತೆಗಳು.

ಸರಹದ್ದು ಕ್ರಾಂತದ ಹಿಂದಿನ ಮುಖ್ಯ ಮಂತ್ರಿಗಳಾದ ಡಾ. ಖಾನಸಾಹೇಬರು ಗವ್ಹರ್ನರರ ಭೇಟಿ ಅವರ ಆಮಂತ್ರಣದ ಪ್ರಕಾರ ತೆಗೆದು ಕೊಂಡು ಚರ್ಚೆಮಾಡಿದರು ಸರಹದ್ದಿದ್ದ ರಾಜಕೀಯ ವರ್ಗದಲ್ಲಿ ಈ ಚರ್ಚೆಗೆ ಬಹಳ ಮಹತ್ವ ಕೊಡಲಾಗುತ್ತಿದೆ.

ಸಿಂಧು ನದಿಗೆ ಪ್ರೆರೆ ಬಂದು ಲಕ್ಷಗಟ್ಟಿ ರೂಪಾಯಿಗಳು ಫಸ್ಟ್ವವಾಗಿದೆ. ಲಾರ್ಖಾನಾ ಕರಾಚಿ ಜಿಲ್ಲೆಗಳಲ್ಲಿಯೇ 10-15 ಲಕ್ಷ ರೂ. ಗಳ ನಷ್ಟವಾಗಿದ್ದು ಕೆಲವು ಕಾಲೋನಿಗಳು ನೀರಲ್ಲೇ ನಿಂತಿವೆ. ಕರಾಚಿಯಲ್ಲಿ ಮಳೆ ಹಾಗೂ ನೆರೆಯಿಂದ ಸಾವಿರಾರು ಮನೆಗಳು ಬಿದ್ದು ಅನೇಕ ಜನ ನಿರಾಶ್ರಿತರಾಗಿರುವರು. ಮುನ್ಸಿಪಾಲಿಟಿಯವರು ಪರಿಹಾರ ನಿಧಿ ಕೂಡಿಸಲು ಪ್ರಾರಂಭಿಸಿರುವರು.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀಯುತ ಹೆಚ್. ಬಿ. ಅಣ್ಣಯ್ಯನವರು 101
,, ಎಸ್. ಎನ್. ರಾಮಶೆಟ್ಟಿ ಮತ್ತು ಲಕ್ಷ್ಮಣ ಶೆಟ್ಟರವರು 101
,, ಕುಪ್ಪಂಡ ಯಂ. ಬೆಳ್ಯಪ್ಪ ,, 50
,, ಮನೆಯಪಂಡ ಯಂ. ಚಿಣ್ಣಪ್ಪ ,, 50
,, ಹಿತಚಿಂತಕರು ,, 50
,, ಕುಪ್ಪಂಡ ಯಂ. ಅಚ್ಚಯ್ಯ ,, 40
,, ಕಾಳ್ಯಪಂಡ ತಿಮ್ಮಯ್ಯ ,, 30
,, ಪುಲಿಯಂಡ ಪೂವಪ್ಪ ,, 25
,, ಸಿ. ಯಸ್. ನಾರಾಯಣ ,, 25
ಮಿಸಸ್ ಕೂತಂಡ ಅಕ್ಕಮ್ಮ ನುಂದಣ್ಣ ,, 15
ಮಿಸಸ್ ಕೊಂಗಂಡ ಡಿ. ಬೆಳ್ಯಪ್ಪ ,, 10
,, ಪಿ. ಬಾಲನ್ ,, 10
,, ಮುಕ್ಕಾಟಿರ ಯಂ. ಚಿಣ್ಣಪ್ಪ ,, 10
,, ಪುಲಿಯಂಡ ಉತ್ತಪ್ಪ ,, 7

5 ರೂ. ಕೊಟ್ಟವರು.

ಶ್ರೀಗಳಾದ ಯಂ. ಯಂ. ಸಿದ್ದೀಕ್‌ರವರು, ಉದಿಯಂಡ ಪೊನ್ನಣ್ಣನವರು, ಚೀಂದ್ರಿಮಾಡ ಉತ್ತಯ್ಯನವರು, ಸಿ. ಎ. ನೊರೋನ್ಹರವರು, ಮೂಕೋಂಡ ತಿಮ್ಮಯ್ಯನವರು, ಓ. ಕುವೂರನ್‌ರವರು, ನೇಕೇತಿರ ಕಾರ್ಯಪ್ಪನವರು, ಚಿಟ್ಟಿಯಂಡ ಯಂ. ಗಣಪತಿಯವರು, ಎ. ಎ. ಸುಬ್ಬಯ್ಯನವರು, ಹೆಚ್. ಎನ್. ಅಪ್ಪಣ್ಣನವರು, ಮಿಸಸ್. ಸಿ. ಎಂ. ಉತ್ತಯ್ಯನವರು, ಮಿಸಸ್. ಕೂತಂಡ ಕಾರ್ಯಪ್ಪನವರು, ಮಿಸಸ್ ಕೂತಂಡ ಪೂವಯ್ಯನವರು.

3 ರೂ. ಕೊಟ್ಟವರು.

ಶ್ರೀ. ಹುಂಗೇರ ಐಯ್ಯಣ್ಣ, ಸೋಮಯ್ಯಂಡ ಮಾದಯಚ್ಚ, ಕುಟ್ಟಂಡ ಬೋಪಯ್ಯ, ಮಿಸಸ್ ಪುಲಿಯಂಡ ಮುದ್ದಪ್ಪ ಇವರುಗಳು.

2. ರೂ. ಕೊಟ್ಟವರು.

ಶ್ರೀಗಳಾದ ಪುಲಿಯಂಡ ಚಿಣ್ಣಪ್ಪ, ಕುಪ್ಪಂಡ ಮೊಚಯ್ಯ, ಮುರುವಂಡ ಬೋಜಪ್ಪ, ಮುಕ್ಕಾಟಿರ ಸೋಮಣ್ಣ, ಹೆಚ್. ಡಿ. ಈರಣ್ಣ, ಮಿಸಸ್. ಪಿ. ಡಿ. ಐಯ್ಯಣ್ಣ.

1. ರೂ. ಕೊಟ್ಟವರು.

ಶ್ರೀಗಳಾದ ಕುಟ್ಟಂಡ ಪೂವಯ್ಯ, ಮಂಡೇಪಂಡ ಜಿ. ಅಕ್ಕಮ್ಮ ಇವರುಗಳು. ಈ ವರೆಗೆ ಒಟ್ಟು ರೂ. 7,235 ಜಮೆಯಾಗಿದೆ.

ರಣಭೇರಿ.

'ಸೆಪ್ಟೆಂಬರ್ 26ರ ನಂತರ ಜರಗಲಿರುವ ಪಾರ್ಲಿಮೆಂಟ್ ಅಧಿವೇಶನದೊಳಗೆ ಶತ್ರುರಾಷ್ಟ್ರಗಳು ನಮಗೆ ಶರಣಾಗತರಾಗದೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ' ಎಂದು ಬ್ರಿಟನಿನ ಬಹಿರ್ವ್ಯವಹಾರ ಮಂತ್ರಿಗಳಾದ ಎಂ. ಆಂಥೋನಿ ಈಡನ್‌ರವರು ಪಾರ್ಲಿಮೆಂಟ್ ಸಭೆಯಲ್ಲಿ ನುಡಿದರು. ಈಡನರದು ಪ್ರಧಾನಮಂತ್ರಿ ಚರ್ಚಿಲ್ಲರಂಥಾ ಜಂಭಕೊಚ್ಚಿಕೊಳ್ಳುವ ಜಾತಿಯಲ್ಲ. ಆವರು ಈ ರೀತಿಯಾಗಿ ನುಡಿದದ್ದು ನೋಡಿದರೆ ನಿಜವಾಗಿಯೂ ಯೂರೋಪು ಯುದ್ಧವು ಅಷ್ಟು ಬೇಗನೆ ಮುಗಿಯುವದೇ? ಯುದ್ಧದಿಂದ ಪರಿಶಪ್ತರಾಗಿ ಜಳಲುತ್ತಿರುವ ಪಿತ ಜನರ ಬವಣೆದು ದೂರವಾಗುವದೇ ಎಂಬ ಕುತೂಹಲ ಪ್ರತಿಯೊಬ್ಬನಲ್ಲಿ ಹುಟ್ಟುತ್ತಿದೆ. ಜರ್ಮನಿಯು ಜರುವ ಸೆಪ್ಟೆಂಬರ್ ಅಂತ್ಯದೊಳಗೆ ಬ್ರಿಟನಿಗೆ ಶರಣು ಬರುವದೆಂಬುದಕ್ಕೆ ಆಧಾರವಿಡಿಯೆಂದು ಅವರ ಮೂಲಿನಿಂದ ತಿಳಿಯಬರುತ್ತದೆ. ಈ ವಿಚಾರವಾಗಿ ಸ್ವಲ್ಪ ಆಳವಾಗಿ ಆಲೋಚಿಸಿದರೆ ಜರ್ಮನರಿಗೆ ರಷ್ಯಾದ ಕಡೆಯಿಂದ ಸೋಲು ಆಗುತ್ತಿಲ್ಲ; ಇಟಲಿಯಲ್ಲಿ ನಿರಾತಂಕವಾಗಿದೆ, ಫ್ರಾನ್ಸಿನಲ್ಲೂ ಜಯವಾಗುತ್ತಿಲ್ಲ - ಅಲ್ಲದೆ ತನ್ನ ಮಿತ್ರ ಜಪಾನೂ ಕೂಡ ಯೂರೋಪಿನ ಜಯವನ್ನೂ ಪಡೆದು ತನ್ನ ಸಹಾಯಕ್ಕೆ ಬರುವಂತೆ ಕಂಡು ಬರುವದಿಲ್ಲ. ಮೇಲಾಗಿ ಪ್ರಚಲಿತವಾಗಿರುವ ವಾದದಂತೆ ಜರ್ಮನರ ವಶದಲ್ಲಿರುವ ರಾಷ್ಟ್ರಗಳು ಜರ್ಮನರ ನೊಗವನ್ನು ಕಿತ್ತಿಡಲು ಪ್ರಯತ್ನಿಸುವ ಮತ್ತು ಜರ್ಮನಿಯೊಳಗೇ ಹಿಟ್ಲರ್ ದರ್ಬಾರವನ್ನು ಕೊನೆಗೊಳಿಸುವ ಪ್ರಯತ್ನವು ನಾಲ್ಕಾಗಳಿಗೆ ನಿರಂತರವನ್ನು ಹುಟ್ಟಿಸಬಹುದಾದ ಕಾರಣಗಳೆ. ಆದರೆ ಈ ವಾರ್ತೆಗಳೆಲ್ಲಾ ನಿಜವಾಗಿರಬೇಕು. ಇವು ನಿಜವಾಗಿದ್ದರೆ ಜರ್ಮನಿಯು ತಲೆಕೆರೆದುಕೊಂಡು ಸಂಧಾನದ ವಿಚಾರ ಆಲೋಚಿಸುವ ದಿನ ಬಂದಿತೆಂದು ಹೇಳಬಹುದು. ಈ ಕಾರಣಗಳನ್ನೆಲ್ಲಾ ಏಕೀಕರಿಸಿ ಈ ಕಾರಣಗಳ ಬೆಳಕಿನಿಂದ ನಾಲ್ಕಾಗಳ ಮನೋಭಾವವನ್ನು ಪರ್ಯಾಲೋಚಿಸಿ ಮಿ. ಆಂತೊಣಿಯವರು ಮೇಲಿನ ಉದ್ಗಾರ ತೆಗೆದಿರಬಹುದು. ಅಲ್ಲದೆ ಇತ್ತಲಾಗಿ ಟರ್ಕಿಯು ಮಿತ್ರರ ಶಿಬಿರಕ್ಕೆ ಸೇರಿಕೊಂಡುದು, ಫ್ರಾನ್ಸಿನ ಫ್ರೆಂಚರು ಮಿತ್ರರೊಡನೆ ಸೇರಿ ಉತ್ಸಾಹದಿಂದ ಯುದ್ಧ ಮಾಡುತ್ತಿರುವದು ಇವೆಲ್ಲಾ ಬ್ರಿಟಿಷ್ ಮಂತ್ರಿಗಳ ಮೇಲಿನ ಹೇಳಿಕೆಗೆ ಬೆಂಬಲಕೊಟ್ಟಿರಬೇಕು. ಆದರೆ ಇಡೀ ಯೂರೋಪನ್ನು ಪದಾಕ್ರಾಂತ ಮಾಡಿ, ಬ್ರಿಟನಿನ ಗರ್ವವನ್ನು ಪಡುಗಿಸಿ, ರಷ್ಯಾದ ಕಣ್ಣಿಲ್ಲಿ ನೀರಿಳಿಸಿ, ಅಮೇರಿಕದ ಆರಾಮ ಕುರ್ಚಿಯ ಜನರನ್ನು ದಿಗ್ಭ್ರಮೆಗೊಳಿಸಿ, ಸಕಲ ದಿಕ್ಕುಗಳಲ್ಲಿ ಅಖಂಡವಾದ ತನ್ನ ಸೈನ್ಯ ಜಾಲವನ್ನು ಹಾಸುರ್ಯವನ್ನು ಬೆಳಗಿಸಿದ ಶತ್ರುವು ಏ. ಈಡನರವರು ಜೀವಾವಧಿಯಲ್ಲಿ ಶರಣಾಗತವಾಗಬಹುದೇ? ಹುಲಿಯೂಗಿ ಗರ್ಜಿಸಿ ಮೆರೆದವರು ಇಲಿಗಳಾಗಿ ಬೋನಿನೊಳಗೆ ಇಷ್ಟರಿಂದಲೇ ಸುಗ್ಗುವದು ಸಾಧ್ಯವೇ? ನಿಜ. ಜರ್ಮನರ ಸಿಂಹಗರ್ಜನೆಯ ಸದ್ದಡಗಿ ದಿನೇ ದಿನೇ ಅವರಿಗೆ ಗಂಡಾಂತರ ವ್ಯಾಪ್ತಿಯಾಗುತ್ತಿದೆ. ಬೇಟೆಗಾರರನ್ನು ಹೆದರಿಸಿ ಇಡೀ ವನವನ್ನು ನಡುಗಿಸುವ ಸಿಂಹವು ಬೇಟೆಗಾರರ ಅಪ್ರಪ್ರಹಾರಗಳಿಂದ ಗಾಯಗೊಂಡಿದೆ. ಆದರೂ ಅನೇಕಾನೇಕ ರಣಕೌಶಲಸಿಶಾರದರು ಹೇಳುತ್ತಿರುವಂತೆ ಜರ್ಮನಿಯು ಇನ್ನೂ ಮೈ ಮನಸ್ಸಿನಲ್ಲಿ ಬಲವಾಗಿ ಎದುರಿಸಲಾರದಷ್ಟು ಶಕ್ತಿಹೀನವಾಗಿಲ್ಲ. ಜರ್ಮನಿಯ ಮಿಲಿಟರಿ ಶಕ್ತಿ ಇನ್ನೂ ಇದೆ. ಅವರ ಅಸ್ತ್ರಶಸ್ತ್ರಗಳು ಮುಗಿದಿಲ್ಲ. 'ಹಾರಾಡುವ ಬಾಂಬುಗಳು ಮುಂಚೆ ಬರಲಿರುವ ಮತ್ತೂ ಭಯಂಕರ ಅಸ್ತ್ರಗಳಿಗೆ ಕೇವಲ ಪೀಠಿಕೆಯಂತಿವೆ. ಭೂಬಾಂಬು, ಸಾವಿರಾರು ಮೈಲುಗಳಷ್ಟು ದೂರಗಳ ವರೆಗೆ ಈ ಅಸ್ತ್ರಗಳ ಪ್ರಯೋಗವಾಗಬಹುದು.' ಎಂಬುದಾಗಿ ಅಮೇರಿಕಾದ ಅಧಿಕಾರಿಗಳು ರೇಡಿಯೋ ಮೂಲಕ ತಿಳಿಸಿರುವರು. ಅಂದರೆ ಶತ್ರುವಿನ ಬತ್ತಳಿಕೆಯಲ್ಲಿ ವಿಶ್ವಾಸಕ್ಕೆ ಅರ್ಹವಾದ ಅಸ್ತ್ರಗಳು ಇನ್ನೂ ಇವೆ. ಅವನ್ನು ಪ್ರಯೋಗಿಸದೆ ಶತ್ರು ಶರಣಾಗತವಾಗಲಾರನು. ಆದ್ದರಿಂದ ಸೆಪ್ಟೆಂಬರ್ ಅಂತ್ಯದೊಳಗೆ ಜರ್ಮನರು ಶರಣಾಗತರಾಗುವರೆಂಬುದು ಕೇವಲ ಮನಸಿನ ಮಂಡಿಗೆಯಲ್ಲದೆ ಬೇರಿಲ್ಲ. ಶತ್ರುವು ಅಸಾಧ್ಯನಿದ್ದಾನೆ. ಅವನನ್ನು ಮುರಿಯಲು ಮಿತ್ರರು ಇನ್ನೂ ಧೀರತೆಯಿಂದ ಕಾದಬೇಕು. ಎಣೆಯಿಲ್ಲದ ತ್ಯಾಗಮಾಡಬೇಕು.

ಒಂದು ವೇಳೆ ಜರ್ಮನಿಯು ಪರಾಜಯವನ್ನು ಹೊಂದಿ ಶರಣಾಗತರಾದರೂ ಯುದ್ಧ ಮುಗಿಯಿತೆಂದು ಹೇಳಲಾಗುವದಿಲ್ಲ. ಜರ್ಮನಿಯಷ್ಟೇ ಬಲಾಢ್ಯವಾಗಿರುವ ಜಪಾನು ಹಿಡಿದಿರುವ ಕಚ್ಚಿಯನ್ನು ಕೆಳಗಿಳಿಸದೆ ಯುದ್ಧ ಮುಗಿದುಹಾರದು. 'ಒಂದು ವರ್ಷದಲ್ಲಿ ಜರ್ಮನಿಯನ್ನು ಮುರಿಯುವೆವು. ಕಂತರದ ಒಂದ ವರ್ಷದಲ್ಲಿ ಜಪಾನರ ಸೊಕ್ಕಡಗಿಸುವೆವು' ಎಂದು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಹೇಳಿದ್ದಾರೆ. ಅವರ ಅಂದಾಜಿನಂತೆಯೇ ಯುದ್ಧ ಮುಗಿಯಲು ಎರಡು ವರ್ಷಗಳು ಬೇಕು! ಹಿಂದೂಡೇರದ ಪೂರ್ವಭಾಗದಲ್ಲಿರುವ ಮಿತ್ರರ ಸರ್ವಸ್ವವನ್ನೂ ಕೇವಲ ಏಳು ವಾರಗಳಲ್ಲಿ ವಶಪಡಿಸಿಕೊಂಡ ಜಪಾನನ್ನು ಮುರಿಯುವದಕ್ಕೆ ಜರ್ಮನಿಯನ್ನು ಮುರಿಯಲು ಮಾಡುತ್ತಿರುವ ಪ್ರಯತ್ನಕ್ಕಿಂತಾ ಹೆಚ್ಚಿನ ಪ್ರಯತ್ನ ಮಾಡಬೇಕಿದೆ. ತನ್ನ ಮನೆಯ ಹತ್ತಿರದಲ್ಲಿರುವ ಶತ್ರುವನ್ನು ಎದುರಿಸುವದು ಹೇಗೆ? ಸಾವಿರಾರು ಮೈಲುಗಳ ದೂರದಲ್ಲಿರುವ ಶತ್ರುವಿಷ್ಟೊಡನೆ ಸೆಣಸುವದು ಹೇಗೆ? ಆದ್ದರಿಂದ ಜಪಾನನ್ನು ಮುರಿಯುವ ಕೆಲಸ ಹಿಂದು ವರ್ಷದಲ್ಲಿ ಆಗದಿದ್ದರೂ ಆಶ್ಚರ್ಯಪಡಬೇಕಿಲ್ಲ. ಯಾಕೆಂದರೆ ಜಪಾನನ್ನು ಮುರಿಯುವ ಕಾರ್ಯದಲ್ಲಿ ರಷ್ಯಾವು ಮಿತ್ರರಿಗೆ ಸಹಾಯಮಾಡದು. ತಟಸ್ಥನಿಲ್ಲಬಹುದು. ರಷ್ಯಾ-ಜಪಾನುಗಳೊಳಗಾದ ಒಪ್ಪಂದದಂತೆ ಪರಸ್ಪರರು ಒಬ್ಬರ ಮೇಲೊಬ್ಬರು ಕೈಮಾಡುವದು ಸಾಧ್ಯವಿಲ್ಲ.

ಒಂದು ವೇಳೆ ಜಪಾನು ಯುದ್ಧದಲ್ಲಿ ಪರಾಜಯವನ್ನು ಪಡೆದರೂ ಯುದ್ಧ ನಿಂತಿತೆಂದು ಹೇಳುವ ಧೈರ್ಯ ಯಾರಿಗಿದೆ? ಮಿತ್ರರಾಷ್ಟ್ರಗಳ ಇಂದಿನ ನೀತಿಯು ಹಾಗೆ ಹೇಳುವ ಧೈರ್ಯವನ್ನು ಯಾರಿಗೂ ಕೊಡದು. ಜಪಾನು ಜರ್ಮನಿಗಳ ಪತನದ ನಂತರದ ಶಾಂತಿಸಮ್ಮೇಳನದಲ್ಲಿ ವಿಜಯಿಗಳಾದ ಈ ರಾಷ್ಟ್ರಗಳು ಭೂಶಾಹಿಯೊದ ಜಪಾನು ಜರ್ಮನಿಗಳನ್ನು ಹಂಚಿದು ಹಂಚಿಕೊಳ್ಳಲು ಕೋಳಿಗಳಂತೆ ಕಚ್ಚಾಡಿಕೊಳ್ಳಲಿಕ್ಕಿಲ್ಲವೆಂದು ಯಾರು ಹೇಳಬಲ್ಲರು? ರಷ್ಯದ ಸರ್ವತೋಮುಖವಾದ ಮತ್ತು ಸಾಪತ್ಕಿಕವಾದ ಅಭ್ಯುನ್ನತಿಯನ್ನು ಕಂಡು ಅದರ ಮೇಲೆ ಕಣ್ಣು ಬೀಳಲಿಕ್ಕಿಲ್ಲವೆಂದು ಹೇಳಬಲ್ಲವರಾರು? ಪ್ರಜಾ ಪ್ರಭುತ್ವ ಸರ್ವಾಧಿಕಾರತ್ವಗಳೊಳಗೆ ನಡೆಯುತ್ತಿರುವ ಇಂದಿನ ಯುದ್ಧವು ಪುನರಪಿ ಬಂಡವಳಶಾಹಿ ಮತ್ತು ಸಾಮ್ಯವಾದಗಳೊಡನೆ ನಡೆಯಲಿಕ್ಕಿಲ್ಲವೆಂದು ಎದೆ ತಟ್ಟಿ ಹೇಳತಕ್ಕವರಾರು?

ಪ್ರತ್ಯಕ್ಷ ರಣರಂಗದತ್ತ ನೋಡಿದರೆ ಮಿತ್ರರು ಸೀನ್ ನದಿಯನ್ನು ದಾಟಿ ಉತ್ತರ ಫ್ರಾನ್ಸಿನಲ್ಲಿ ಮುಂದರಿಯುತ್ತಿರುವರು. ಫಾಲೈಸ್ ಗಡಿಯಲ್ಲಿ ಜರ್ಮನರು ಅತ್ಯುಗ್ರವಾಗಿ ಮಿತ್ರರನ್ನು ಎದುರಿಸಿ ಹಿಮ್ಮೆಟ್ಟಿಸಿದರು. ಈಗ ಅವರ ಪ್ರತಿಭಟನೆ ಇಳಿಮುಖವಾಗಿದೆ. ಮಿತ್ರರ ದಂಡುಗಳು ವಾರ್ಸೆಲ್ಸ್ ಹತ್ತಿರ ಬಂದಿವೆ. ಅಮೇರಿಕಾದ ಪಡೆಗಳು ಉತ್ತರದಿಂದ ಫ್ರಾನ್ಸಿನ ಹತ್ತಿರ ಬಂದಿವೆ. ಪ್ಯಾರಿಸಿನ ಎತ್ತರವಾದ ಗೋಪುರಗಳು ನೋಡಲಿಗುವಷ್ಟು ಹತ್ತಿರ ಬಂದಿರುವದಾಗಿ ತಿಳಿಯಬಂದಿದೆ. ರಷ್ಯಾ ಗಡಿಯಲ್ಲಿ ಲಿಥುವೇನಿಯಾ ಭಾಗದಲ್ಲಿ ಪ್ರಚಂಡ ಟೆಂಕ್ ಕಾಳಗ ನಡೆಯುತ್ತಿವೆ. ಜರ್ಮನರು ವೀರಾವೇಶದಿಂದ ಕದನ ಪ್ರಾರಂಭಿಸಿದ್ದಾರೆ. ಪೋಲೆಂಡಿನೆ ನುಗ್ಗಿದ ರಷ್ಯಾ ಸೇನೆಗಳು ವಾರ್ಸಾ ಕಡೆಯಲ್ಲಿ ಹೋರಾಡುತ್ತಿದ್ದರೂ ಹೆಚ್ಚಿನ ಪ್ರದೇಶವನ್ನು ಆಕ್ರಮಿಸಿರುವದು ಸಾಧ್ಯವಾಗಿರುವುದಿಲ್ಲ. ಅನೇಕಾನೇಕ ವಿಮಾನಗಳು ಜಪಾನಿನ ನಾಲ್ಕು ನಗರಗಳ ಮೇಲೆ ಬಾಂಬು ಹಾಕಿಸುವರು. ಬರ್ಮಾ ಗಡಿಯಲ್ಲಿ ಮಿತ್ರರ 14ನೇ ದಂಡು ಬರ್ಮಾ ಗಡಿಯೊಳಗೆ ಹೊಗ್ಗಿದೆ. ಜಪಾನರು ಹಿಂದೂದೇಶದಿಂದ ಪೂರ್ಣವಾಗಿ ಹಿಮ್ಮೆಟ್ಟಿದರೂ ಎಂಬುವುದು ಇದರಿಂದ ತಿಳಿದು ಬರುತ್ತವೆ. ಫ್ರೆಂಚ್ ಫ್ರಾನ್ಸಿನಲ್ಲಿರುವ ದಂಡುಗಳು ಸಾವಧಾನವಾಗಿ ಮುಂದರಿಯುತ್ತಿರುವವು.

ಪ್ಯಾರಿಸ್ ತೆರೆದ ನಗರ.

ಜರ್ಮನರು ಪ್ಯಾರಿಸ್ಸನ್ನು ತೆರೆದ ನಗರವೆಂದು ಸ್ವಾನಿಸಿದರು. ಕಳೆದ ಸಾರಿ ಜರ್ಮನರ ಆಕ್ರಮಣ ನಡೆದಾಗ ಪ್ಯಾರಿಸಿನಲ್ಲಿಯು ಉತ್ತಮೋತ್ತಮ ಕಲಾಕೌಶಲಯುಕ್ತ ದಿವ್ಯಭವ್ಯ ಕೃತಿಗಳು ವಾಸವಾಗಿದ್ದುದರಿಂದು ಫ್ರೆಂಚರು ಅದನ್ನು ತೆರೆದ ನಗರವೆಂದು ಸಾರಿದ್ದರು. ಆದ್ದರಿಂದ ಪ್ಯಾರಿಸ್ಸು ಹೆಚ್ಚಿನ ನಷ್ಟವಿಲ್ಲದೆ ಯುದ್ಧಕ್ಕೆ ನೊದಲ್ಪಟ್ಟಂತೆಯೇ ಇದೆ. ಜರ್ಮನರೂ ಸಜ್ಜ ಕಲಾಪ್ರೇಮದಿಂದ ಪ್ಯಾರಿಸನ್ನು ತೆರೆದ ನಗರವೆಂದು ಸಾರಿದ್ದಾರೆ.

—೦೦—

ಗಾಂಧಿ ಜಿನ್ನಾ ಭೇಟಿ ಮುಂದರಿಯಿತು.

ತಾ. 19-8-44ರಲ್ಲಿ ನಡೆಯಬೇಕಿದ್ದ ಗಾಂಧಿ ಜಿನ್ನಾ ಭೇಟಿಯು ಅಕಸ್ಮಾತ್ತಾಗಿ ಮುಂದುವರಿಸಲ್ಪಟ್ಟಿದೆ. ಜಿನ್ನಾರವರು ಅಕಸ್ಮಾತ್ತು ರೋಗಗ್ರಸ್ಥರಾದುದೇ ಇದಕ್ಕೆ ಕಾರಣ. ನಾಳೆ ದಿನ ಅವರ ಭೇಟಿಯಾಗಬಹುದೆಂದು ವಾರ್ತೆಯಿದೆ. ಅದೂ ಜಿನ್ನಾರವರ ಶರೀರ ಸ್ವಾಸ್ಥ್ಯತೆಯನ್ನವಲಂಬಿಸಿದೆ.

—೦೦—

ಸಾರ್ವಜನಿಕರಲ್ಲಿ ವಿನಂತಿ.

ದಿವಂಗತವಾದ ನನ್ನ ತಂಡೆ ಅಪ್ಪಚ್ಚನವರ ಜ್ಞಾಪಕಾರ್ಥವಾಗಿ 'ನೆರವಂಡ ಉಕ್ಕಪ್ಪಚ್ಚು' ಎಂಬ ಬೋರ್ಡನ್ನೇ ಇಟ್ಟು ನಡಿಸಿಕೊಂಡು ಬರುವ ಜವುಳ ಅಂಗಡಿಯನ್ನು ಮಡಿಕೇರಿ ಸೈನಿಯರ್ ಫ್ಲೋಡಿನಲ್ಲು ನಾನು ಹೊಸದಾಗಿ ಕಟ್ಟಿಸಿರುವ ಅಂಗಡಿ ಮನೆಯಲ್ಲಿಯೂ ಇಟ್ಟು ತಾ. 17-8-44ರಿಂದ ವ್ಯಾಪಾರ ಪ್ರಾರಂಭವಾಗುತ್ತಿದೆ. ಅತ್ಯುತ್ತಮವಾದ ಹೊಸ ಸೂಲುಗಳನ್ನು ತರಿಸಿ, ಗಿರಾಕಿಗಳ ತೃಪ್ತಿಯಂತ್ತೇ ಧೈರ್ಯವಾಗಿಟ್ಟು ಕಾರ್ಯ ಪ್ರಾರಂಭಿಸಿದ್ದೇನೆ. ಈ ವರೆಗೆ ನನ್ನಲ್ಲಿ ವ್ಯಾಪಾರಮಾಡಿ ನನ್ನನ್ನು ಪ್ರೋತ್ಸಾಹಿಸಿದ ಬಂಧು ಮಿತ್ರರೂ, ಸಾರ್ವಜನಿಕರೂ ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ನನ್ನ ವಿನೀತ ಕೇಳಿಕೆ.

2) ನೆರವಂಡ ಎ. ಉಕ್ಕಪ್ಪ,
ತಾ. 17-8-44. ಮಡಿಕೇರಿ.

ದೊಡ್ಡ ರೋಗ.

(Rinderpest)

ಶ್ರೀ. ಕಾರ್ಯದರ್ಶಿ, ಕೊಡಗು ಪಶುಸಂಗೋಪನಾ ಸಂಘ.

ಇಂಗ್ಲಿಷಿನಲ್ಲಿ "ರಿಂಡರ್‌ಪೆಸ್ಟ್" ಎಂಬ ಹೆಸರಿನಿಂದ ಕರೆಯಲ್ಪಡುವ ದನಗಳಿಗೆ ಬರುವ ದೊಡ್ಡ ರೋಗವನ್ನು ತಿಳಿಸಲು ಪ್ರಯತ್ನಿಸಿದ್ದೇನೆ. ಇದು ಸಾಂಕ್ರಾಮಿಕ ಜಾಡ್ಯವಾದರೂ ಕೂಡ ಜಾನುವಾರುಗಳಿಗೆ ಈ ರೋಗವು ಹರಡದಂತೆ ತಡೆಗಟ್ಟಲ್ಪಡಬಹುದಾದ ರೋಗವಾಗಿದೆ. ಜಾನುವಾರುಗಳು ರೈತರ ಸರ್ವಸ್ವವಾಗಿರುವ ಕಾರಣ ಅವು ಈ ರೋಗಕ್ಕೆ ತುತ್ತಾದರೆ ರೈತಾಪಿ ಜನರಲ್ಲಿ ಆರ್ಥಿಕ ದುಃಸ್ಥಿತಿಯುಂಟಾಗಿ ಅವರ ಜೀವಶಕ್ತಿಯು ಉಗ್ಗಿಹೋಗಿ 'ತನ್ನ ಜಾಳೇ ಹಾಳು' ಎಂಬ ಭಾವನೆಯು ತಲೆದೋರುತ್ತದೆ. ಸಂಜಾತಪಲ್ಲಿ ಪಶ್ಚ ಬಂದರೂ ಆ ದುಃಖವನ್ನು ಬಹಿದ್ದು ಸಹಿಸಿಕೊಳ್ಳಬಲ್ಲರು. ಆದರೆ ಹಾಲು ಬೆಣ್ಣೆಗಾಗಿ ಅಧ್ಯಾರಭೂತವಾದ ಮತ್ತು ಜನತೆಯ ಜೀವನಾಧಾರವಾದ ಗೋಕಾಯಿಗಳು ಮರಣಕ್ಕೆ ಒಳಗಾದರೆ ಜನತೆಯು ಕಂಗಾಲಾಗಿ ಕಾತುರ ಪಡುವರು. ಈ ಮಹಾ ಭಯಂಕರವಾದ ಜಾಡ್ಯವನ್ನು ಬ್ರಿಟಿಷ್ ಇಂಡಿಯ, ಅಮೇರಿಕಾ, ನ್ಯೂಜಿಲೇಂಡ್, ಮತ್ತು ಆಸ್ಟ್ರೇಲಿಯಾ ಖಂಡಗಳಲ್ಲಿ ಸಂಪೂರ್ಣವಾಗಿ ನಾಶಪಡಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಪೂರ್ತಿಈ ರೋಗದ ಹಾವಳಿಗೆ ಸಾಕಷ್ಟು ಗಮನ ಕೊಡದೆ ಇರುವುದು ಬಹು ಶೋಚನೀಯವಾದ ಸಂಗತಿಯಾಗಿದೆ.

ಈ ರೋಗವು ಗಾಳಿಯಿಂದಾಗಲೀ, ನೀರಿನಿಂದಾಗಲೀ ಬರುವಂಥಾದ್ದಲ್ಲ. ರೋಗ ತಗಲಿದ ರಾಸುಗಳ ಸೋಂಕಿನ ಸ್ಪರ್ಶದಿಂದ ನಿಧಾನವಾಗಿ ಹರಡುವ ಜಾಡ್ಯವಾಗಿದೆ. ಜಾನುವಾರುಗಳು ರೋಗ ತಗಲಿ ಉಪಚಾರಕ್ಕೆ ಒಳಗಾಗುವುದಕ್ಕಿಂತಲೂ, ಈ ಜಾಡ್ಯವು ಅವುಗಳಿಗೆ ಬಾರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬರ ಸ್ವಹಿತವು ಕರ್ತವ್ಯವಾಗಿದೆ.

ರೋಗ ತಗಲಿದ ಜಾನುವಾರುಗಳನ್ನು ಉಪಚರಿಸುವಾಗ ಈ ಕೆಳಗಿನ ನಿಯಮಗಳನ್ನು ಚೆನ್ನಾಗಿ ಪಕ್ಕದಲ್ಲಿರಿಸುವುದು ಎಲ್ಲರಿಗೂ ಹಿತಕರ—

(1) ರೋಗವು ಗ್ರಾಮಗಳಲ್ಲಿ ತಲೆದೋರಿದೊಡನೆ ರೈತರು ಪಶುವೈದ್ಯಾ ಇಲಾಖೆಯವರಿಗೆ ಅರುವಿಕೆಯನ್ನು ಕೊಟ್ಟು ಅವರಿಂದ ತಕ್ಕ ಚಿಕಿತ್ಸಾ ಕ್ರಮವನ್ನು ಕೈಕೊಳ್ಳುವಂತೆ ಮಾಡುವುದು.

(2) ರೋಗ ತಗಲಿದ ರಾಸುಗಳನ್ನು ಹಿಂಡಿನಿಂದ 300 ಗಜ ದೂರದಲ್ಲಿರಿಸುವುದು.

(3) ಅವುಗಳಿಗೆ ರಾಗಿಯ ಗಂಜಿಯನ್ನು ಕುಡಿಯಲಿಕ್ಕೆ ಕೊಡುವುದು.

(4) ಪಶುವೈದ್ಯ ಡಾಕ್ಟರವರನ್ನು ಕರೆಸಿಕೊಂಡು ಅವರಿಗೆ ತಕ್ಕ ಸಹಾಯವನ್ನು ಕೊಟ್ಟುರೋಗ ತಗಲಿದ ರಾಸುಗಳಿಗೆ 'ಗೋಟ್ ಬ್ಲಡ್ ವಿರಸ್' ನಿಂದ ಹಾಕು ಹಾಕಿಸಿ ರೋಗವು ಹರಡದಂತೆ ಅವರ ಸಲಹೆಗನುಸಾರವಾಗಿ ನಡೆಯುವುದು.

(5) ರೋಗಕ್ಕೆ ತುತ್ತಾಗಿ ಮರಣ ಹೊಂದಿದ ರಾಸುಗಳ ಮೂಗು, ಬಾಯಿ ಮತ್ತು ಗುದ ಪ್ರದೇಶಗಳಿಗೆ ಚಿಂದಿ ಬಟ್ಟೆಯಿಂದ ದಿಮ್ಮಿಗಳನ್ನು ಹಾಕಿಸಿ ನಿರ್ಜನ ಪ್ರದೇಶಕ್ಕೆ ಒಯ್ಯಬೇಕು.

(6) ನೀರು ನಿಲ್ಲದ, ಜಾನುವಾರುಗಳ ಮೇವಿನಿಂದ ದೂರವಾದ, ಜನರ ವಹಿವಾಟುಗಳಿಲ್ಲದ ಸ್ಥಳದಲ್ಲಿ ಸಾಧಾರಣ 9 ಅಡಿ ಆಳದ ಗುಂಡಿಗಳನ್ನು ಕೋಡಿ, ಅವುಗಳ ಚರ್ಮವು ಮಂಡಿಗಳ ಕೈ ಸೇರದಂತೆ ಬೆನ್ನಪಡಿಸಿ ಹೂತು ಹಾಕಬೇಕು.

(7) ರೋಗ ತಗಲಿದ್ದ ರಾಸುಗಳನ್ನು ಉಪಚರಿಸುವಾಗ ಉಪಯೋಗಿಸಿದ ಪದಾರ್ಥಗಳನ್ನೂ, ಅವು ವಿಸರ್ಜಿಸಿದ ಮಲ ಮೂತ್ರಗಳನ್ನೂ, ಆ ಗುಂಡಿಯಲ್ಲಿಯೇ ಹಾಕಿ ಮಣ್ಣಿನಿಂದ ಮುಚ್ಚಿ, ನಾಯಿ, ನರಿಗಳು ಹೆಣಗಳನ್ನು ಹೊರ ಕೆಡೆಯುಗೊಡದಂತೆ ಮುಳ್ಳಿನಿಂದ ಬಲವಾಗಿ ಮುಚ್ಚಬೇಕು.

(8) ರೋಗವಿರುವ ಕಡೆಗಳಿಂದ ದನ ಕರುಗಳ ಜಾತ್ರೆಗಳಲ್ಲಿ, ಸಾಮಾನು ಸರಂಜಾಮುಗಳನ್ನಾಗಲೀ ಬೇರೆ ಕಡೆಗೆ ಒಯ್ಯಬಾರದು. ರೋಗವಿರುವ ಕಡೆಗಳಿಂದ ರಾಸುಗಳನ್ನು ಮೂರಾಟಕ್ಕೆ ಸಂತೆಗಳಿಗೆ ಹೊಡೆಯಬಾರದು. ಊರಿನವರ ದನಗಳನ್ನೆಲ್ಲಾ ಒಂದೇ ಕಡೆ ಮೇಯಿಸುವುದನ್ನು ಬಾಕಿ ಮಾಡಬೇಕು.

(9) ರೋಗವಿರುವ ಕಡೆಗಳಿಂದ ಊರಿಂದೂರಿಗಾಗಲೀ, ಮನೆಯಿಂದ ಮನೆಗಾಗಲೀ ದನಗಳು ಹೋಗುವುದನ್ನು ಸಹ ಬಾಕಿ ಮಾಡಬೇಕು.

(10) ಜಾನುವಾರುಗಳನ್ನು ಸಂತೆಯಿಂದ ಕೊಂಡುಕೊಂಡಾಗ ಅವುಗಳನ್ನು ಡಾಕ್ಟರರಿಂದ ಪರೀಕ್ಷಿಸಿ, ದನಗಳ ಹಿಂಡಿನಲ್ಲಿಸೇರಿಸದೆ, ಒಂದೆರಡು ವಾರ ಪ್ರತ್ಯೇಕ ವಿನಾಯಿಸಿ ಇಡಬೇಕು.

ಈ ನಿಯಮಗಳನ್ನು ಹತ್ತು ನಿಯಮಗಳನ್ನು ಸರಿಸಿ, ಪಶುವೈದ್ಯ ಡಾಕ್ಟರವರ ಸಹಾಯವನ್ನು ಪಡೆದು ಪ್ರತಿ ಗ್ರಾಮಗಳಲ್ಲಿಯೂ ರಾಸುಗಳಿಗೆ ಡಾಳು ಹಾಕಿಸಿ ಸಂರಕ್ಷಿಸಿದ್ದೇ ಆದರೆ, ಈ ಮಹಾ ರೋಗದ ಹಾವಳಿಯಿಂದಾಗುತ್ತಿರುವ ದಾರುಣವಾದ ದುಃಖವನ್ನು ಪ್ರಜಾ ವರ್ಗದವರಾಗಲೀ, ಗೋಕಾಯಿಗಳಾಗಲೀ ಅನುಭವಿಸುವುದಿಲ್ಲವೆಂಬುದು ನಮ್ಮ ಪೂರ್ಣ ಭರವಸೆಯಾಗಿದೆ. ಡಾಳು ಹಾಕಿಸಿಕೊಂಡ ರಾಸುಗಳಲ್ಲಿ ಶೇಕಡ 80, 90ರಷ್ಟು ಈ ರೋಗದಿಂದ ಬದುಕಿವೆ. ಮತ್ತೂ ಬದುಕುತ್ತಾ ಇವೆ ಎಂಬುದು ನಮ್ಮ ಅನುಭವದ ಮಾತಾಗಿದೆ.

ಈ ಮಹಾ ರೋಗಕ್ಕೆ ಇದು ಒಂದೇ ಸಂಜೀವಿನಿ ಶಾಸ್ತ್ರಾಯವಾದ ಮಹಾ ಔಷಧಿಯಾಗಿದೆ. ಈ ಚಿಕಿತ್ಸಾಕ್ರಮದ ಪ್ರಯೋಜನವನ್ನು ಪ್ರಕಟಿಸಿ ಬಿಟ್ಟು ಹೊಂದಿ ದೇಶದ ಏಳಿಗೆಗೂ, ಸಂಪತ್ತಿನ ವೃದ್ಧಿಗೂ ಆಧಾರಭೂತರಾಗಿರುವ ಜಾನುವಾರುಗಳ ಮೇಲೆ ಈ ಮಹಾ ಭಯಂಕರ ರೋಗದಿಂದ ತಪ್ಪಿಸಿ, ನಾಡಿನಲ್ಲಿ ಈ ರೋಗದ ಹುಟ್ಟನ್ನು ಅಡಗಿಸಿ, ಜನತೆಯ ಕಲ್ಯಾಣವನ್ನು ಕೋರಬೇಕೆಂಬುದೇ ನಮ್ಮ ಶ್ರೇಯಃ ಪ್ರಾರ್ಥನೆಯಾಗಿದೆ.

ನಿಧಿ ವಾಪಸು.

ಜಪಾನು ಜರ್ಮನಿಯಲ್ಲಿ ವ್ಯಾಪಾರದ ಉದ್ದಿಶ್ಯಕ್ಕಾಗಿ ಇಟ್ಟಿದ್ದ ನಿಧಿಯನ್ನೆಲ್ಲಾ ಜಪಾನ್ ಸರ್ಕಾರವು ವಾಪಸು ತೆಗೆದುಕೊಳ್ಳುವುದು ಎಂಬ ಲಂಡನಿನ ಒಂದು ಪತ್ರಿಕೆಯು ತಿಳಿಸಿದೆ.

ಹೀಗೆ ಜಪಾನು ಜರ್ಮನಿಯಿಂದ ನಿಧಿಯನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಎರಡು ಕಾರಣಗಳನ್ನು ಕೊಡಲಾಗಿದೆ—ಮೊದಲನೆಯದಾಗಿ ಜಪಾನಿನಲ್ಲಿಯೇ ಹಣ ಕಾಸಿನ ಚಿಕ್ಕಟ್ಟು ಬಲವಾಗಿದೆ. ಎರಡನೇಯದಾಗಿ ಜರ್ಮನಿಯು ಸೋಲುವ ಸ್ಥಿತಿಯಲ್ಲಿದೆಯೆಂದು ಜಪಾನಿಗೆ ಚೆನ್ನಾಗಿ ಗೊತ್ತಾಗಿದೆ.

—೦೦—

SHORT TENDER NOTICE.

Coorg Public Works Department

Metalling the Bettageri–Nalknad road between Kottamudi and Kakkabe Causeways from 9/5 to 17/5.

Sealed tenders will be received by the Divisional Officer Coorg Division, at his office at Mercara up to 4-30 P. M. on 30-8-44 for metalling the Bettageri–Nalknad road 9/5 to 17/5.

The tender should be in the prescribed form obtainable from the Divisional Officer. The detailed tender notice, schedule of quantities and the tender form will be available in the Divisional Office on payment of Rs. 2/- per each set.

C. B. MANNADIAR,
Divisional Officer,
29-7-44. P. W.D., Coorg.

ಮೂರಾಟಕ್ಕಿವೆ.

ಮಡಿಕೇರಿ ಹೈಸ್ಕೂಲ್ ರಸ್ತೆಯಲ್ಲಿ ಉಳುವಾರನ ಲೇಟ್ ಅಪ್ಪಯ್ಯನವರ ಮಕ್ಕಳು ಗಣಪತಿ. ಮೂಪಯ್ಯನವರ ಹೆಸರಿನಲ್ಲಿ ಜಮಾಬಂದಿ ನಡೆದುಬರುವ ಈ ಕೆಳಗಿನ ಸೊತ್ತುಗಳು ವಿಕ್ರಯಿಸಲ್ಪಡುತ್ತವೆ.

ಒಂದು ಬಂಗ್ಲೆ, ಅಡಿಗೆ ಮನೆ, ಬೋಟ್ ಹೌಸ್, ಕಕ್ಕಸ್ ಮನೆ, ಪಂಪು, ಜಾವಿ ಸಹ ಇವೆ.

ಖಾಯಿಸ್ ಪಡುವವರು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದು ಯಾ ಕುದ್ದು ವಿಚಾರಿಸಿ ತಿಳಿದುಕೊಳ್ಳಬಹುದು. 'X'

C/o. "ಕೊಡಗು",
ಮಡಿಕೇರಿ.
4–3

WANTED.

An Estate writer with the knowledge of Accountancy and type writing on a salary of Rs. 50/- with dearness allowance of Rs. 15/- per month. An increment of Rs. 5/- per year will be given on the merit of the work turned out. Free accomodation will be given.

For further particulars please apply to:–

P. Kunhi Kannan,
Perumbubetta Estate,
Pollibetta.
8–7

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

37) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂ. ಮೀರಿದೆ
	ಚಾಲ್ತಿಯಿರುವ ವಿಮೆಗಳು	೫,೪೪,೪೪,೦೦೦ ,, ,,
	ಆಸ್ತಿ	೬,೫೦,೪೬,೦೦೦ ,, ,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೫೮,೦೦,೦೦೦ ,, ,,

ಅಂಗ ಕಛೇರಿ:	ವಿಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್ಸ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಉರ್ಜಿತಗಳನ್ನು ಸ್ವಾಗತಿಸಿವೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಬಾಯಿ

"ಟ್ರೂ ಪಿಕಲ್"
ಕಂಪೆನಿಯಲ್ಲಿ ವಿಮೆ ಮಾಡುವುದೇ ಯೋಗ್ಯವೆಂದು ನಿಮ್ಮ 1944 ರ ತೀರ್ಮಾನನವಾಗಲಿ

1943ರಲ್ಲಿ ಮಾಡಿದ ನಿವ್ವಳ ಮೌಲ್ಯ ರೂ. 91,99,125.
ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.
ಮುಖ್ಯ ಖಜೀರ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:–

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

382)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊಬಲಗು 95,060, ಜಮಾಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇ 2½, 3 ವರ್ಷಗಳಿಂದ 5 ವರ್ಷಗಳ ವರೆಗೆ 2¾, 5 ವರ್ಷಗಳಿಂದ 10 ವರ್ಷಗಳ ವರೆಗೆ 3½, 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0–8–0.

ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.